ಮುಂಜಾವು

ವಾರಪತ್ರಿಕೆ.

ಸಂಪಾದಕ: ನಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೩ನೇ ವರ್ಷ ೫ನೇ ಸಂಚಿಕೆ ಕೊಪ್ಪ ೨೩-೯-೧೯೮೪ ಭಾನುವಾರ ಬೆಲೆ ೨೦ ಪೈಸೆ

ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಮೂಲಕ ಆಅನೇ ಸಾಲಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಡೇ ದಿನಾಂಕ ಅಕ್ಟೋಬರ್ ೧೨.

೧೯೮೩ ನೇ ಸೆಪ್ಟಂಬರ್, ಅಕ್ಟೋಬರ್ ತಿಂಗಳಲ್ಲಿ ಅರ್ಜಿ ಸಲ್ಲಿಸಿರುವವರು ಪುನಃ ಸಲ್ಲಿಸಬೇಕಾಗಿಲ್ಲ. ಆದರೆ ಕಳೆದ ಬಾರಿ ಅರ್ಜಿ ತಿರಸ್ಕೃತರಾದವರು ಪುನಃ ಸಲ್ಲಿಸಬೇಕು. ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಉಪ ನಿರ್ದೇಶಕರ ಕಛೇರಿಯಲ್ಲೂ, ತಾ॥ ಸಹಾಯಕವಿದ್ಯಾಧಿಕಾರಿಗಳ ಕಛೇರಿಯಲ್ಲೂ ಪ್ರಕಟಿಸಲಾಗಿದೆ. ವಿವರಗಳಿಗೆ ಪೆ. ೧೫ರ ಗೆಜೆಟ್ ನೋಡಬಹುದು. ಅಥವಾ ಮಲ್ನಾಡ್ ನ್ಯೂಸ್ ಏಜೆನ್ಸಿ, ಹರಿಹರಪುರ — ಇವರನ್ನು ಸಂಪರ್ಕಿಸಬಹುದು.

ಶೃಂಗೇರಿಯಲ್ಲಿ ಅಡಿಕೆ ಬೆಳೆ ಬಗ್ಗೆ ವಿಚಾರ ಸಂಕಿರಣ

ಶೃಂಗೇರಿ: ಅಡಿಕೆ ಉತ್ಪಾದನೆ – ಸಂರಕ್ಷಣೆ ಕುರಿತ ೨ ದಿನಗಳ ವಿಚಾರ ಸಂಕಿರಣವೊಂದು ಅಕ್ಟೋಬರ್ ೮ ಮತ್ತು ೯ ರಂದು ಇಲ್ಲಿ ನಡೆಯಲಿದೆ.

ಬೆಂಗಳೂರು, ಕೇರಳ ಮೊದಲಾದ ಕಡೆಗಳ ವಿಶ್ವ ವಿದ್ಯಾ ನಿಲಯಗಳಿಂದ ಖ್ಯಾತ ತಜ್ಞರು ಇದರಲ್ಲಿ ಭಾಗವಹಿಸಿ ರೈತರಿಗೆ ವಿವರವಾಗಿ ಮಾಹಿತಿ ನೀಡುವರು.

ಅಡಿಕೆ ಬೆಳೆಗೆ ತಗಲುವ ರೋಗಗಳು, ಅವುಗಳ ನಿವಾರಣೆ, ಉತ್ಪಾದನೆಯ ಹೆಚ್ಚಳ, ಕೀಟಬಾಧೆ, ಗೊಬ್ಬರ ಕೊಡುವುದು—ಮುಂತಾದುವುಗಳ ಬಗ್ಗೆ ಈ ವಿಚಾರ ಸಂಕಿರಣ ಬೆಳಕು ಚೆಲ್ಲಲಿದೆ.

ಕೊಪ್ಪ, ಶೃಂಗೇರಿ, ನ. ರಾ. ಪುರ ತಾ॥ ಗಳಲ್ಲಿ ಈಗ್ಗೆ ನಾಲ್ಕೈದು ದಶಕಗಳಿಂದ ಅಡಿಕೆ ತೋಟಗಳನ್ನು ನಾಶಪಡಿಸುತ್ತಿರುವ 'ಹಳದಿ ಎಲೆ ರೋಗ'ದ ನಿವಾರಣೆಯ ದಿಕ್ಕಿನಲ್ಲಿ ಕೃಷಿ ವಿಜ್ಞಾನಿಗಳು ನಡೆಸುತ್ತಿರುವ ಸಂಶೋಧನೆಗಳ ಬಗ್ಗೆಯೂ ತಿಳುವಳಿಕೆ ನೀಡಲಾಗುವುದು.

ಹಲವಾರು ಪ್ರಮುಖ ಪ್ರಗತಿಪರ ರೈತರು ಭಾಗವಹಿಸಿ ಅಡಿಕೆ ಬೆಳೆಗಾರರ ಬಗ್ಗೆ ಮಾತನಾಡುತ್ತಾರೆ.

ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ,ತಜ್ಞರೊಂದಿಗೆ ಪ್ರಶ್ನೋತ್ತರದಲ್ಲೂ ಪಾಲ್ಗೊಂಡು ಈ ವಿಚಾರ ಸಂಕಿರಣದ ಪೂರ್ಣ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ. (ಸೌಜನ್ಯ: 'ಹೊಸದಿಗಂತ')

ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ಪೇದೆ ನಾಪತ್ತೆ

ಕೊಪ್ಪ: ಸಂತೆಯ ದಿನ (ಸೆ.೧೬) ಉರಿಬಿಸಿಲಲ್ಲಿ ಚಿಕ್ಕ ಮಗುವನ್ನು ಕಳೆದುಕೊಂಡು ದುಃಖಿಸುತ್ತಿದ್ದ ಬಸವಾನಿ ಕಡೆಯ ಮಹಿಳೆಯೊಬ್ಬರಿಗೆ ಕುಡಿದ ಮತ್ತಿನಲ್ಲಿ ಅಶ್ಲೀಲ-ಅಪಮಾನಕರ ಮಾತುಗಳಿಂದ ಬಾಯಿಗೆ ಬಂದಂತೆ ಕೂಗಾಡಿ ಸಾರ್ವಜನಿಕರ ತೀವ್ರ ಕೋಪಕ್ಕೆ ತುತ್ತಾದ ಆಂತೋಣಿ ಎಂಬ ಪೋಲೀಸ್ ಪೇದೆ ಅನಂತರ ಕೆಲಸಕ್ಕೆ ಹಾಜರಾಗದೆ ನಾಪತ್ತೆಯಾಗಿದ್ದಾನೆನ್ನಲಾಗಿದೆ.

ಆತ ಇಲ್ಲಿನ ಡಯಾಸ್ ಬಳಗದ ಪಾಸ್ಕಲ್ ಡಯಾಸ್‌ರ ಖಾಸಾ ಭಾವನೆಂಟನೆಂದೂ, ಈ ಹಿಂದೆ ೨ ಬಾರಿ ಇಲಾಖೆಯಿಂದ ವಜಾ ಆಗಿದ್ದು ಪುನಃ "ಸೇರಿಸಿಕೊಳ್ಳಲ್ಪಟ್ಟವ" ನೆಂದೂ ಹೇಳಲಾಗಿದೆ.(ಮಗು ಆತನಿಗೆ ಸಿಕ್ಕಿತ್ತೆಂದೂ ಅದಕ್ಕೇ 'ಜೋರು' ಹಾಕಿದನೆಂದೂ ಪೋಲೀಸ್ ಮೂಲಗಳ ಹೇಳಿಕೆ.)

ರೈತ ಹುತಾತ್ಮರ ದಿನ: ಪಾಲ್ಗೊಳ್ಳಲು ಕರೆ

ಕೊಪ್ಪ: ಅಕ್ಟೋಬರ್ ೮ ರಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ನಡೆಯಲಿರುವ ರೈತ ಹುತಾತ್ಮರ ದಿನಾಚರಣೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಪಾಲ್ಗೊಳ್ಳಬೇಕೆಂದು ಕೊಪ್ಪ ತಾ॥ ರೈತ ಸಂಘದ ಅಧ್ಯಕ್ಷ ಜಿ. ಡಿ. ಪರಮೇಶ್ವರ ಕರೆಯಿತ್ತಿದ್ದಾರೆ.

ಹಣ್ಣು, ತೆಂಗು, ಉರುವಲು ಸಸಿಗಳ ಹಂಚಿಕೆ

ಕೊಪ್ಪ: ಇಲ್ಲಿನ ಕೃಷಿ ಇಲಾಖೆ ಮತ್ತು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಸೆ.೨೧ ರಂದು ಶಾಸಕ ಗೋವಿಂದ ಗೌಡರು ಸಣ್ಣ—ಅತಿ ಸಣ್ಣ ರೈತರಿಗೆ ತೆಂಗು, ಉರುವಲು ಮತ್ತು ಹಣ್ಣಿನ ಗಿಡಗಳನ್ನು ವಿತರಣೆ ಮಾಡಿದರು. ಸ॥ ಅರಣ್ಯ ಸಂರಕ್ಷಣಾಧಿಕಾರಿ ಎಂ. ಎಸ್. ಬುರಾನ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕೃಷಿ ಅಧಿಕಾರಿ ಶ್ರೀಕಂಠಯ್ಯ ಮುಖ್ಯ ಅತಿಥಿಗಳಾಗಿದ್ದರು. ಸ॥ ಕೃಷಿ ನಿರ್ದೇಶಕ ಎಂ.ಎಸ್. ಸುಬ್ಬಯ್ಯ ಗೌಡ ಸ್ವಾಗತಿಸಿ, ಎಂ.ಚಂದ್ರಶೇಖರ್ ವಂದಿಸಿದರು.

ತಾಲ್ಲೂಕಿನ ೮೮ ಜನರಿಗೆ ಪ್ರತಿಯೊಬ್ಬರಿಗೂ ೧೨ ತೆಂಗು, ೫ ಬಾಳೆ, ೧ ಗೇರು, ೧ ಹಲಸು ಮತ್ತು ೧೦೦ ಸುಬಾಬುಲ್ ಸಸಿಗಳನ್ನು ಹಂಚಲಾಯಿತು.

ಶೃಂಗೇರಿ ಸ॥ ಪ್ರೌಢಶಾಲೆಗೆ ಅಧ್ಯಾಪಕರ ಕೊರತೆ

ಶೃಂಗೇರಿ: ಇಲ್ಲಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಾಲ್ಕೈದು ವಿಭಾಗಗಳಲ್ಲಿ ಅಧ್ಯಾಪಕರಿಲ್ಲದೆ ಪಾಠ ಪ್ರವಚನಗಳಿಗೆ ತೊಂದರೆಯಾಗಿದೆ. ವಿಜ್ಞಾನದ ಪ್ರಾಯೋಗಿಕ ಪಾಠಕ್ಕೆ ಸಾಮಗ್ರಿಗಳನ್ನು ಒಂದು ವರ್ಷದಿಂದ ಖರೀದಿಸಿಯೇ ಇಲ್ಲ. ಇದರಿಂದ ಪರೀಕ್ಷೆ ಎದುರಿಸುತ್ತಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ತೀವ್ರ ಅತೃಪ್ತರಾಗಿದ್ದು ಹೋರಾಟಕ್ಕಿಳಿಯುವ ಸೂಚನೆಗಳಿವೆಯೆನ್ನಲಾಗಿದೆ.

ಸದ್ಯಕ್ಕೆ ಇಬ್ಬರು ಅಧ್ಯಾಪಕರ ನೇಮಕವಾಗಿರುವುದಾಗಿಯೂ, ಉಳಿದವರ ನೇಮಕವೂ ಸದ್ಯದಲ್ಲೇ ಆಗಬಹುದೆಂದೂ ಶಾಸಕರು ನಮ್ಮ ಪ್ರತಿನಿಧಿಗೆ ತಿಳಿಸಿದ್ದಾರೆ.

ದರ್ಖಾಸ್ತು ಮಂಜೂರಾಗದಿದ್ದರೆ ಹೋರಾಟ: ದಲಿತ ಸಂಘರ್ಷ ಸಮಿತಿ ಎಚ್ಚರಿಕೆ

ಕೊಪ್ಪ: ಈ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ಸುಮಾರು ೩೫೦ ಜನ ಭೂ ಹೀನ ದಲಿತರು ೧೯೭೨-೭೩ ರಿಂದಲೂ ಭೂಲಭ್ಯತಾ ಪಟ್ಟಿಯ ಪ್ರಕಾರವೇ ಜಮೀನಿಗಾಗಿ ದರಖಾಸ್ತು ಸಲ್ಲಿಸುತ್ತಾ ಬಂದಿದ್ದರೂ ೮ ಜನರ ಹೊರತು ಬೇರಾರಿಗೂ ಮಂಜೂರಾಗಿಲ್ಲ. ಈ ಬಗ್ಗೆ ತಹಸೀಲ್ದಾರರಿಗೆ ಕೊಟ್ಟ ಮನವಿಗಳೆಲ್ಲ ಮೂಲೆ ಸೇರಿದಂತಿವೆ.

ಇತ್ತ ಜಿಲ್ಲಾಧಿಕಾರಿಗಳು, ಜಿಲ್ಲೆಯಲ್ಲಿ ಲಭ್ಯವಿರುವ ಭೂಮಿಯನ್ನೆಲ್ಲ ಡಿಸೆಂಬರ್ ಅಂತ್ಯದೊಳಗೆ ಮಂಜೂರು ಮಾಡುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಇನ್ನಾದರೂ **ದಲಿತರ ಅರ್ಜಿಗಳನ್ನೆಲ್ಲ ಹುಡುಕಿತೆಗೆದು,** ಮೇಲ್ಕಂಡ ಗಡುವಿನೊಳಗಾದರೂ ಅವರೆಲ್ಲರ ದರ್ಖಾಸ್ತನ್ನು **ಮೊದಲು ಮಂಜೂರು** ಮಾಡದಿದ್ದರೆ ತೀವ್ರ ಹೋರಾಟ ನಡೆಸಬೇಕಾಗುವುದು — ಎಂದು ಕೊಪ್ಪ ತಾ॥ ದಲಿತ ಸಂಘರ್ಷ ಸಮಿತಿ ಸಂಚಾಲಕ ಬಿ. ಎನ್. ತಮ್ಮಣ್ಣ ಎಚ್ಚರಿಸಿದ್ದಾರೆ.

ನಿಸರ್ಗ ಸಂಪತ್ತಿನ ರಕ್ಷಣೆಗೆ ಕರೆ

ಕೊಪ್ಪ: ಈ ಪ್ರದೇಶ ನಿಸರ್ಗ ಸಂಪತ್ತಿನ ಖಣಿಯಾಗಿತ್ತೆನ್ನುವುದು ಇಂದು ಇತಿಹಾಸದ ಮಾತಾಗುತ್ತಿದೆ. ಅದನ್ನು ಇನ್ನಾದರೂ ಸಂರಕ್ಷಣೆ ಮಾಡಿಕೊಳ್ಳಲು ಲಯನ್ಸ್‌ನಂಥ ಸೇವಾ ಸಂಸ್ಥೆಗಳು ಅತ್ಯಂತ ಪ್ರಾಶಸ್ತ್ಯ ಕೊಡಬೇಕು — ಎಂಬುದಾಗಿ 'ಉದಯವಾಣಿ'-'ತರಂಗ' ಬಳಗದ ಶಿವಮೊಗ್ಗ ಜಿಲ್ಲಾ ವರದಿಗಾರ ಜಿ. ವಿ. ಬಾಲಕೃಷ್ಣ ಹೇಳಿದರು.

ಅವರು ಇಲ್ಲಿನ ಲಯನ್ಸ್ ಕ್ಲಬ್ ಸೆ.೧೮ ರಂದು ಆಚರಿಸಿದ 'ಮ್ಯಾಗಸಿನ್ ದಿನ'ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು

"ಇಂಥ ನಿಸರ್ಗ ಸಂಪತ್ತಿನ ನಾಶದಿಂದ ಉಂಟಾದ ಪರಿಸರದ ಅಸಮತೋಲನದಿಂದ ಮಳೆ ಮತ್ತಿತರ ಹವಾಮಾನ ಪರಿಸ್ಥಿತಿಯಲ್ಲಿ ತೀವ್ರ ಏರುಪೇರುಗಳು ಈಗಲೇ ಕಂಡುಬರುತ್ತಿವೆ. ಅವನ್ನು ಇನ್ನಾದರೂ ತಡೆಗಟ್ಟುವುದು ಅತಿ ಮುಖ್ಯ" ಎಂದು ಅವರು ಹೇಳಿದರು

ಹಿಂದೆ ಕೇವಲ ದೊಡ್ಡ ಪಟ್ಟಣಗಳ ಭಾರಿ ಶ್ರೀಮಂತರ ಗುತ್ತಿಗೆಯಾಗಿದ್ದ ಲಯನ್ಸ್ ಕ್ಲಬ್ ಇಂದು ಇಂಥ ಗ್ರಾಮಾಂತರ ಪ್ರದೇಶಕ್ಕೂ ಹಬ್ಬಿ, ಸಮಾಜದ ಪರಿಶ್ರಮಿಗಳ, ಪರಿತ್ಯಕ್ತರ ಬಾಳಿಗೆ ಆಸರೆ ನೀಡುವಲ್ಲಿ ಸರ್ಕಾರಕ್ಕೆ ಪೂರಕವಾಗಿ ದುಡಿಯುತ್ತಿರುವುದರ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಊರಿನ ಹಾಗೂ ಸುತ್ತಮುತ್ತಲಿನ ಜನತೆಯ ತಕ್ಷಣದ ಮತ್ತು ತೀವ್ರವಾದ ಸಮಸ್ಯೆಗಳ ನಿವಾರಣೆಗಾಗಿ, ಪ್ರಭಾವಿ ಪ್ರತಿಷ್ಠಿತರ ಸಂಘಟನೆಯಾದ ಲಯನ್ಸ್ ಪ್ರಭಾವ ಅಥವಾ ಒತ್ತಡ ಬೀರಬೇಕು. ಎಸ್ಟೇಟುಗಳಲ್ಲಿ ಮಕ್ಕಳ 'ಕುರುಡು ತನ' ದಂಥ ಕಾಯಿಲೆಯ ಹತೋಟಿಗೆ ಶ್ರಮಿಸುವುದರ ಜೊತೆಗೆ, ಅದಕ್ಕೆ ಮುಖ್ಯ ಕಾರಣವಾದ ಪೌಷ್ಟಿಕಾಂಶದ ಕೊರತೆಯನ್ನು ನೀಗುವುದರ ಕಡೆ ಹೆಚ್ಚು ಒತ್ತು ಕೊಡಬೇಕು. ತನ್ನ

(೨ನೇ ಪುಟಕ್ಕೆ)

ಕೊಪ್ಪ ತಹಸೀಲ್ದಾರರ ತುರ್ತು ಗಮನಕ್ಕೆ

ಬೆಳಗೊಳದಲ್ಲಿ ಕೊಪ್ಪ—ಜಯಪುರ ರಸ್ತೆಯ ಪೂರ್ವ ಭಾಗಕ್ಕೆ ಸ.ನಂ. ೩೩ ರಲ್ಲಿ ೩ ದಲಿತ ಕುಟುಂಬಗಳು ನಾಲ್ಕೈದು ವರ್ಷದಿಂದಲೂ ಮನೆ ಕಟ್ಟಿಕೊಂಡು ಜಮೀನಿಗೆ ದರ್ಖಾಸ್ತು ಕೊಟ್ಟುಕೊಂಡು ಮಂಜೂರಾತಿಗಾಗಿ ಕಾಯುತ್ತಿದ್ದಾರೆ. ದಲಿತರ ಔದಾರ್ಯದಿಂದಲೇ ಅಲ್ಲೊಂದು ಮನೆ ಕಟ್ಟಿಕೊಂಡ ಗೋಪಾಲ್ ಎಂಬ ವ್ಯಕ್ತಿ ದಲಿತರು ಕೇಳಿದ್ದ ಜಾಗದಲ್ಲೇ ಒಂದು ಎಕರೆಗೆ ಬೇಲಿ ಹಾಕಿ ಬಾಳೆ ಬೆಳೆಯುತ್ತಿರುವುದಲ್ಲದೆ, ಈಗ ದಲಿತರ ಮನೆಗಳನ್ನೂ ಸೇರಿಸಿ ಸೆ. ೧೭ ರಂದು ಅಳೆಸಿಕೊಂಡಿದ್ದಾರೆ. (ಹರಿಹರಪುರ ಸಹಕಾರ ಸಂಘದ ಉದ್ಯೋಗಿಯಾದ ಇವರಿಗೆ ಈ ಜಾಗದಿಂದ ಅರ್ಧ ಮೈಲಿ ದೂರದಲ್ಲಿ ಮನೆ, ಜಮೀನು ಎಲ್ಲ ಇದೆ.) ದಲಿತರು ಪ್ರತಿಭಟಿಸಿ ಆಳೆತ ಕೆಲಸ ನಿಲ್ಲುವಂತೆ ಮಾಡಿದ್ದರೂ ಬಾಂದು ಕಲ್ಲು ಹಾಕಿ ಆಗಿದೆ. ಕೊಪ್ಪ ತಹಸೀಲ್ದಾರರು, ಅಲ್ಲಿ ಯಾವುದೇ ಕೆಲಸ ಮುಂದುವರಿಸದಂತೆ ತುರ್ತು ಆದೇಶ ನೀಡಿ, ಕೂಡಲೇ ದಲಿತರ ದರಖಾಸ್ತನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸುತ್ತೇವೆ.

—ಸಂಪಾದಕ.

ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

೩ನೇ ವರ್ಷ ೫ನೇ ಸಂಚಿಕೆ ಕೊಪ್ಪ ೨೩-೯-೧೯೮೪ ಭಾನುವಾರ ಬೆಲೆ ೨೦ ಪೈಸೆ

ಶೃಂಗೇರಿಯಲ್ಲಿ ಅಡಿಕೆ ಬೆಳೆ ಬಗ್ಗೆ ವಿಚಾರ ಸಂಕಿರಣ

ಶೃಂಗೇರಿ: ಅಡಿಕೆ ಉತ್ಪಾದನೆ – ಸಂರಕ್ಷಣೆ ಕುರಿತ ೨ ದಿನಗಳ ವಿಚಾರ ಸಂಕಿರಣವೊಂದು ಅಕ್ಟೋಬರ್ ೮ ಮತ್ತು ೯ ರಂದು ಇಲ್ಲಿ ನಡೆಯಲಿದೆ.

ಬೆಂಗಳೂರು, ಕೇರಳ ಮೊದಲಾದ ಕಡೆಗಳ ವಿಶ್ವ ವಿದ್ಯಾ ನಿಲಯಗಳಿಂದ ಖ್ಯಾತ ತಜ್ಞರು ಇದರಲ್ಲಿ ಭಾಗವಹಿಸಿ ರೈತರಿಗೆ ವಿವರವಾಗಿ ಮಾಹಿತಿ ನೀಡುವರು.

ಅಡಿಕೆ ಬೆಳೆಗೆ ತಗಲುವ ರೋಗಗಳು, ಅವುಗಳ ನಿವಾರಣೆ, ಉತ್ಪಾದನೆಯ ಹೆಚ್ಚಳ, ಕೀಟಬಾಧೆ, ಗೊಬ್ಬರ ಕೊಡುವುದು–ಮುಂತಾದುವುಗಳ ಬಗ್ಗೆ ಈ ವಿಚಾರ ಸಂಕಿರಣ ಬೆಳಕು ಚೆಲ್ಲಲಿದೆ.

ಕೊಪ್ಪ, ಶೃಂಗೇರಿ, ನ. ರಾ. ಪುರ ತಾ|| ಗಳಲ್ಲಿ ಈಗ್ಗೆ ನಾಲ್ಕೈದು ದಶಕಗಳಿಂದ ಅಡಿಕೆ ತೋಟಗಳನ್ನು ನಾಶಪಡಿಸುತ್ತಿರುವ 'ಹಳದಿ ಎಲೆ ರೋಗ'ದ ನಿವಾರಣೆಯ ದಿಕ್ಕಿನಲ್ಲಿ ಕೃಷಿ ವಿಜ್ಞಾನಿಗಳು ನಡೆಸುತ್ತಿರುವ ಸಂಶೋಧನೆಗಳ ಬಗ್ಗೆಯೂ ತಿಳುವಳಿಕೆ ನೀಡಲಾಗುವುದು.

ಹಲವಾರು ಪ್ರಮುಖ ಪ್ರಗತಿಪರ ರೈತರು ಭಾಗವಹಿಸಿ ಅಡಿಕೆ ಬೆಳೆಗಾರರ ಬಗ್ಗೆ ಮಾತನಾಡುತ್ತಾರೆ.

ರೈತರು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಜ್ಞರೊಂದಿಗೆ ಪ್ರಶ್ನೋತ್ತರದಲ್ಲೂ ಪಾಲ್ಗೊಂಡು ಈ ವಿಚಾರ ಸಂಕಿರಣದ ಪೂರ್ಣ ಪ್ರಯೋಜನ ಪಡೆಯುವರೆಂದು ಆಶಿಸಲಾಗಿದೆ. (ಸೌಜನ್ಯ: 'ಹೊಸದಿಗಂತ')

ಶೃಂಗೇರಿ ಸ|| ಪ್ರೌಢಶಾಲೆಗೆ ಅಧ್ಯಾಪಕರ ಕೊರತೆ

ಶೃಂಗೇರಿ: ಇಲ್ಲಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ನಾಲ್ಕೈದು ವಿಭಾಗಗಳಲ್ಲಿ ಅಧ್ಯಾಪಕರಿಲ್ಲದೆ ಪಾಠ ಪ್ರವಚನಗಳಿಗೆ ತೊಂದರೆಯಾಗಿದೆ. ವಿಜ್ಞಾನದ ಪ್ರಾಯೋಗಿಕ ಪಾಠಕೆ ಸಾಮಗ್ರಿಗಳನ್ನು ಒಂದು ವರ್ಷದಿಂದ ತೋರಿಸಿಯೇ ಇಲ್ಲ. ಇದರಿಂದ ಪರೀಕ್ಷೆ ಕತ್ತಿರಾಗುತ್ತಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ತೀವ್ರ ಅತೃಪ್ತರಾಗಿದ್ದು ಹೋರಾಟ ಕೈಗೊಳ್ಳುವ ಸೂಚನೆಗಳಿವೆಯೆನ್ನಲಾಗಿದೆ.

ಸದ್ಯಕ್ಕೆ ಇಬ್ಬರು ಅಧ್ಯಾಪಕರ ನೇಮಕವಾಗಿರುವುದಾಗಿಯೂ, ಉಳಿದವರ ನೇಮಕವೂ ಸದ್ಯದಲ್ಲೇ ಆಗಬಹುದೆಂದೂ ಶಾಸಕರು ನಮ್ಮ ಪ್ರತಿನಿಧಿಗೆ ತಿಳಿಸಿದ್ದಾರೆ.

ದರ್ಖಾಸ್ತು ಮಂಜೂರಾಗದಿದ್ದರೆ ಹೋರಾಟ: ದಲಿತ ಸಂಘರ್ಷ ಸಮಿತಿ ಎಚ್ಚರಿಕೆ

ಕೊಪ್ಪ: ಈ ತಾಲ್ಲೂಕಿನ ವಿವಿಧ ಕಡೆಗಳಲ್ಲಿ ಸುಮಾರು ೩೫೦ ಜನ ಭೂ ಹೀನ ದಲಿತರು ೧೯೮೨-೮೩ ರಿಂದಲೂ ಭೂಲಭ್ಯತಾ ಪಟ್ಟಿಯ ಪ್ರಕಾರವೇ ಜಮೀನಿಗಾಗಿ ದರಖಾಸ್ತು ಸಲ್ಲಿಸುತ್ತಾ ಬಂದಿದ್ದರೂ ೯ ಜನರ ಹೊರತು ಬೇರಾರಿಗೂ ಮಂಜೂರಾಗಿಲ್ಲ. ಈ ಬಗ್ಗೆ ತಹಸೀಲ್ದಾರರಿಗೆ ಕೊಟ್ಟ ಮನವಿಗಳೆಲ್ಲ ಮೂಲೆ ಸೇರಿದಂತಿವೆ.

ಇತ್ತ ಜಿಲ್ಲಾಧಿಕಾರಿಗಳು, ಜಿಲ್ಲೆಯಲ್ಲಿ ಲಭ್ಯವಿರುವ ಭೂಮಿಯನ್ನೆಲ್ಲ ಡಿಸೆಂಬರ್ ಅಂತ್ಯದೊಳಗೆ ಮಂಜೂರು ಮಾಡುವುದಾಗಿ ಹೇಳುತ್ತಿದ್ದಾರೆ. ಆದ್ದರಿಂದ ಇನ್ನಾದರೂ **ದಲಿತರ ಅರ್ಜಿಗಳನ್ನೆಲ್ಲ ಹುಡುಕಿ ತೆಗೆದು,** ಮೇಲ್ಕಂಡ ಗಡುವಿನೊಳಗಾದರೂ ಅವರೆಲ್ಲರ ದರ್ಖಾಸ್ತನ್ನು **ಮೊದಲು ಮಂಜೂರು** ಮಾಡದಿದ್ದರೆ ತೀವ್ರ ಹೋರಾಟ ನಡೆಸಬೇಕಾಗುವುದು — ಎಂದು ಕೊಪ್ಪ ತಾ|| ದಲಿತ ಸಂಘರ್ಷ ಸಮಿತಿ ಸಂಚಾಲಕ ಬಿ. ಎನ್. ತಮ್ಮಣ್ಣ ಎಚ್ಚರಿಸಿದ್ದಾರೆ.

ಕೊಪ್ಪ ತಹಸೀಲ್ದಾರರ ತುರ್ತು ಗಮನಕ್ಕೆ

ಬೆಳಗೊಳದಲ್ಲಿ ಕೊಪ್ಪ–ಜಯಪುರ ರಸ್ತೆಯ ಪೂರ್ವ ಭಾಗಕ್ಕೆ ಸ.ನಂ. ೩೩ ರಲ್ಲಿ ೩ ದಲಿತ ಕುಟುಂಬಗಳು ನಾಲ್ಕೈದು ವರ್ಷದಿಂದಲೂ ಮನೆ ಕಟ್ಟಿಕೊಂಡು ಜಮೀನಿಗೆ ದರ್ಖಾಸ್ತು ಕೊಟ್ಟುಕೊಂಡು ಮಂಜೂರಾತಿಗಾಗಿ ಕಾಯುತ್ತಿದ್ದಾರೆ. ದಲಿತರ ಔದಾರ್ಯದಿಂದಲೇ ಅಲ್ಲೊಂದು ಮನೆ ಕಟ್ಟಿಕೊಂಡ ಗೋಪಾಲ್ ಎಂಬ ವ್ಯಕ್ತಿ ದಲಿತರು ಕೇಳಿದ್ದ ಜಾಗದಲ್ಲೇ ಒಂದು ಎಕರೆಗೆ ಬೇಲಿ ಹಾಕಿ ಬಾಳೆ ಬೆಳೆಯುತ್ತಿರುವುದಲ್ಲದೆ, ಈಗ ದಲಿತರ ಮನೆಗಳನ್ನೂ ಸೇರಿಸಿ ಸೆ. ೧೭ ರಂದು ಅಳೆಸಿಕೊಂಡಿದ್ದಾರೆ. (ಹರಿಹರಪುರ ಸಹಕಾರ ಸಂಘದ ಉದ್ಯೋಗಿಯಾದ ಇವರಿಗೆ ಈ ಜಾಗದಿಂದ ಅರ್ಧ ಮೈಲಿ ದೂರದಲ್ಲಿ ಮನೆ, ಜಮೀನು ಎಲ್ಲ ಇದೆ.) ದಲಿತರು ಪ್ರತಿಭಟಿಸಿ ಅಳತೆ ಕೆಲಸ ನಿಲ್ಲುವಂತೆ ಮಾಡಿದ್ದರೂ ಬಾಂದು ಕಲ್ಲು ಹಾಕಿ ಆಗಿದೆ. ಕೊಪ್ಪ ತಹಸೀಲ್ದಾರರು, ಅಲ್ಲಿ ಯಾವುದೇ ಕೆಲಸ ಮುಂದುವರಿಸದಂತೆ ತುರ್ತು ಆದೇಶ ನೀಡಿ, ಕೂಡಲೇ ದಲಿತರ ದರಖಾಸ್ತನ್ನು ಇತ್ಯರ್ಥಗೊಳಿಸಬೇಕೆಂದು ಒತ್ತಾಯಿಸುತ್ತೇವೆ.

—ಸಂಪಾದಕ.

ಶಿಕ್ಷಕರ ನೇಮಕಕ್ಕೆ ಅರ್ಜಿ ಆಹ್ವಾನ

ಚಿಕ್ಕಮಗಳೂರು: ಜಿಲ್ಲಾ ಮಟ್ಟದ ನೇಮಕಾತಿ ಸಮಿತಿ ಮೂಲಕ ೮೫ನೇ ಸಾಲಿಗೆ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಡೇ ದಿನಾಂಕ ಅಕ್ಟೋಬರ್ ೧೨.

೧೯೮೩ ನೇ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಅರ್ಜಿ ಸಲ್ಲಿಸಿರುವವರು ಪುನಃ ಸಲ್ಲಿಸಬೇಕಾಗಿಲ್ಲ. ಆದರೆ ಕಳೆದ ಬಾರಿ ಅರ್ಜಿ ತಿರಸ್ಕೃತರಾದವರು ಪುನಃ ಸಲ್ಲಿಸಬೇಕು. ತಿರಸ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಜಿಲ್ಲಾ ಉಪ ನಿರ್ದೇಶಕರ ಕಛೇರಿಯಲ್ಲೂ, ತಾ|| ಸಹಾಯಕವಿದ್ಯಾಧಿಕಾರಿಗಳ ಕಛೇರಿಯಲ್ಲೂ ಪ್ರಕಟಿಸಲಾಗಿದೆ. ವಿವರಗಳಿಗೆ ಸೆ. ೧೩ರ ಗೆಜೆಟ್ ನೋಡಬಹುದು. ಅಥವಾ ಮಲ್ನಾಡ್ ನ್ಯೂಸ್ ಏಜೆನ್ಸಿ, ಹರಿಹರಪುರ — ಇವರನ್ನು ಸಂಪರ್ಕಿಸಬಹುದು.

ಮಹಿಳೆಯೊಂದಿಗೆ ಅಸಭ್ಯವಾಗಿ ವರ್ತಿಸಿದ ಪೇದೆ ನಾಪತ್ತೆ

ಕೊಪ್ಪ: ಸಂತೆಯ ದಿನ (ಸೆ.೧೬) ಉರಿಬಿಸಿಲಲ್ಲಿ ಚಿಕ್ಕ ಮಗುವನ್ನು ಕಳೆದುಕೊಂಡು ದುಃಖಿಸುತ್ತಿದ್ದ ಬಸವಾನಿ ಕಡೆಯ ಮಹಿಳೆಯೊಬ್ಬರಿಗೆ ಕುಡಿದ ಮತ್ತಿನಲ್ಲಿ ಅಶ್ಲೀಲ-ಅಪಮಾನಕರ ಮಾತುಗಳಿಂದ ಬಾಯಿಗೆ ಬಂದಂತೆ ಕೂಗಾಡಿ ಸಾರ್ವಜನಿಕರ ತೀವ್ರ ಕೋಪಕ್ಕೆ ತುತ್ತಾದ ಅಂತೋಣಿ ಎಂಬ ಪೋಲೀಸ್ ಪೇದೆ ಅನಂತರ ಕೆಲಸಕ್ಕೆ ಹಾಜರಾಗದೆ ನಾಪತ್ತೆಯಾಗಿದ್ದಾನೆನ್ನಲಾಗಿದೆ.

ಆತ ಇಲ್ಲಿನ ಡಯಾಸ್ ಬಳಗದ ಪಾಸ್ಕಲ್ ಡಯಾಸ್‌ರ ಖಾಸಾ ಭಾವನೆಂಟನೆಂದೂ, ಈ ಹಿಂದೆ ೨ ಬಾರಿ ಇಲಾಖೆಯಿಂದ ವಜಾ ಆಗಿದ್ದು ಪುನಃ "ಸೇರಿಸಿಕೊಳ್ಳಲ್ಪಟ್ಟವ" ನೆಂದೂ ಹೇಳಲಾಗಿದೆ.(ಮಗು ಆತನಿಗೆ ಸಿಕ್ಕಿತ್ತೆಂದೂ ಅದಕ್ಕೇ 'ಜೋರು' ಹಾಕಿದನೆಂದೂ ಪೋಲೀಸ್ ಮೂಲಗಳ ಹೇಳಿಕೆ.)

ರೈತ ಹುತಾತ್ಮರ ದಿನ: ಪಾಲ್ಗೊಳ್ಳಲು ಕರೆ

ಕೊಪ್ಪ: ಅಕ್ಟೋಬರ್ ೮ ರಂದು ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಆಶ್ರಯದಲ್ಲಿ ನಡೆಯಲಿರುವ ರೈತ ಹುತಾತ್ಮರ ದಿನಾಚರಣೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ರೈತರು ಪಾಲ್ಗೊಳ್ಳಬೇಕೆಂದು ಕೊಪ್ಪ ತಾ|| ರೈತ ಸಂಘದ ಅಧ್ಯಕ್ಷ ಜಿ. ಡಿ. ಪರಮೇಶ್ವರ ಕರೆಯಿತ್ತಿದ್ದಾರೆ.

ಹಣ್ಣು, ತೆಂಗು, ಉರುವಲು ಸಸಿಗಳ ಹಂಚಿಕೆ

ಕೊಪ್ಪ: ಇಲ್ಲಿನ ಕೃಷಿ ಇಲಾಖೆ ಮತ್ತು ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಸೆ.೨೧ ರಂದು ಶಾಸಕ ಗೋವಿಂದ ಗೌಡರು ಸಣ್ಣ–ಅತಿ ಸಣ್ಣ ರೈತರಿಗೆ ತೆಂಗು, ಉರುವಲು ಮತ್ತು ಹಣ್ಣಿನ ಗಿಡಗಳನ್ನು ವಿತರಣೆ ಮಾಡಿದರು. ಸ|| ಅರಣ್ಯ ಸಂರಕ್ಷಣಾಧಿಕಾರಿ ಎಂ. ಎಸ್. ಬುರಾನ್ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕೃಷಿ ಅಧಿಕಾರಿ ಶ್ರೀಕಂಠಯ್ಯ ಮುಖ್ಯ ಅತಿಥಿಗಳಾಗಿದ್ದರು. ಸ|| ಕೃಷಿ ನಿರ್ದೇಶಕ ಎಂ.ಎಸ್. ಸುಬ್ಬಯ್ಯ ಗೌಡ ಸ್ವಾಗತಿಸಿ, ಎಂ.ಚಂದ್ರಶೇಖರ್ ವಂದಿಸಿದರು.

ತಾಲ್ಲೂಕಿನ ೮೮ ಜನರಿಗೆ ಪ್ರತಿಯೊಬ್ಬರಿಗೂ ೧೨ ತೆಂಗು, ೫ ಬಾಳೆ, ೧ ಗೇರು, ೧ ಹಲಸು ಮತ್ತು ೧೨೦ ಸುಬಾಬುಲ್ ಸಸಿಗಳನ್ನು ಹಂಚಲಾಯಿತು.

ನಿಸರ್ಗ ಸಂಪತ್ತಿನ ರಕ್ಷಣೆಗೆ ಕರೆ

ಕೊಪ್ಪ: ಈ ಪ್ರದೇಶ ನಿಸರ್ಗ ಸಂಪತ್ತಿನ ಖಣಿಯಾಗಿತ್ತೆನ್ನುವುದು ಇಂದು ಇತಿಹಾಸದ ಮಾತಾಗುತ್ತಿದೆ. ಅದನ್ನು ಇನ್ನಾದರೂ ಸಂರಕ್ಷಣೆ ಮಾಡಿಕೊಳ್ಳಲು ಲಯನ್ಸ್‌ನಂಥ ಸೇವಾ ಸಂಸ್ಥೆಗಳು ಅತ್ಯಂತ ಪ್ರಾಶಸ್ತ್ಯ ಕೊಡಬೇಕು — ಎಂಬುದಾಗಿ 'ಉದಯವಾಣಿ'–'ತರಂಗ' ಬಳಗದ ಶಿವಮೊಗ್ಗ ಜಿಲ್ಲಾ ವರದಿಗಾರ ಜಿ. ವಿ. ಬಾಲಕೃಷ್ಣ ಹೇಳಿದರು.

ಅವರು ಇಲ್ಲಿನ ಲಯನ್ಸ್ ಕ್ಲಬ್ ಸೆ.೧೮ ರಂದು ಆಚರಿಸಿದ 'ಮ್ಯಾಗಸಿನ್ ದಿನ'ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದರು

"ಇಂಥ ನಿಸರ್ಗ ಸಂಪತ್ತಿನ ನಾಶದಿಂದ ಉಂಟಾದ ಪರಿಸರದ ಅಸಮತೋಲನದಿಂದ ಮಳೆ ಮತ್ತಿತರ ಹವಾಮಾನ ಪರಿಸ್ಥಿತಿಯಲ್ಲಿ ತೀವ್ರ ಏರುಪೇರುಗಳು ಈಗಲೇ ಕಂಡುಬರುತ್ತಿವೆ. ಅವನ್ನು ಇನ್ನಾದರೂ ತಡೆಗಟ್ಟುವುದು ಅತಿ ಮುಖ್ಯ" ಎಂದು ಅವರು ಹೇಳಿದರು

ಹಿಂದೆ ಕೇವಲ ದೊಡ್ಡ ಪಟ್ಟಣಗಳ ಭಾರಿ ಶ್ರೀಮಂತರ ಗುತ್ತಿಗೆಯಾಗಿದ್ದ ಲಯನ್ಸ್ ಕ್ಲಬ್ ಇಂದು ಇಂಥ ಗ್ರಾಮಾಂತರ ಪ್ರದೇಶಕ್ಕೂ ಹಬ್ಬಿ, ಸಮಾಜದ ಪರಿಶ್ರಮಿಗಳ, ಪರಿತ್ಯಕ್ತರ ಬಾಳಿಗೆ ಆಸರೆ ನೀಡುವಲ್ಲಿ ಸರ್ಕಾರಕ್ಕೆ ಪೂರಕವಾಗಿ ದುಡಿಯುತ್ತಿರುವುದರ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಊರಿನ ಹಾಗೂ ಸುತ್ತಮುತ್ತಲಿನ ಜನತೆಯ ತಕ್ಷಣದ ಮತ್ತು ತೀವ್ರವಾದ ಸಮಸ್ಯೆಗಳ ನಿವಾರಣೆಗಾಗಿ, ಪ್ರಭಾವ ಪ್ರತಿಷ್ಠಿತರ ಸಂಘಟನೆಯಾದ ಲಯನ್ಸ್ ಪ್ರಭಾವ ಅಥವಾ ಒತ್ತಡ ಬೀರಬೇಕು. ಎಸ್ಟೇಟುಗಳಲ್ಲಿ ಮಕ್ಕಳ 'ಕುರುಕು ತಿನಿ' ಎಂಥ ಕಾಯಿಲೆಯ ಚಿಕಿತ್ಸೆಗೆ ಶ್ರಮಿಸುವುದರ ಜೊತೆಗೆ, ಅದಕ್ಕೆ ಮುಖ್ಯ ಕಾರಣವಾದ ಪೌಷ್ಟಿಕಾಂಶದ ಕೊರತೆಯನ್ನು ನೀಗುವುದರ ಕಡೆ ಹೆಚ್ಚು ಒತ್ತು ಕೊಡಬೇಕು. ತನ್ನ

(೩ನೇ ಪುಟಕ್ಕೆ)

ಶೃಂಗೇರಿಯಲ್ಲಿ ಬಿ.ಕೆ.ಸುಮಿತ್ರ ಅವರ ಕಾರ್ಯಕ್ರಮಕ್ಕೆ
ದಾಖಲೆಯ ಜನ ಪ್ರವಾಹ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಇಲ್ಲಿ ಬೆಳ್ಳಿಹಬ್ಬದ ಸಾರ್ವಜನಿಕ ಗಣೇಶೋತ್ಸವದ ಮುಕ್ತಾಯದ ಮುನ್ನಾ ದಿನ ನಡೆದ, ಚಲನಚಿತ್ರ ಹಿನ್ನೆಲೆ ಗಾಯಕಿ ಬಿ.ಕೆ.ಸುಮಿತ್ರ ಅವರ ರಸಮಂಜರಿ ಕಾರ್ಯಕ್ರಮಕ್ಕೆ ಸುತ್ತಮುತ್ತಲ ದೂರ ದೂರದ ಹಳ್ಳಿಗಳಿಂದಲೂ ಸೇರಿದಂತೆ ೮ ಸಾವಿರಕ್ಕೂ ಹೆಚ್ಚು ಜನರ ಭಾರಿ ಜನ ಸಂದಣಿ ಸೇರಿತ್ತು. ಇದು ಇಲ್ಲಿನ ಗಣಪತಿ ಇತಿಹಾಸದಲ್ಲಿ ಒಂದು ದಾಖಲೆ ಎನ್ನಲಾಗಿದೆ.

ಕಿಷ್ಕಿಂಧ ಜಾಗ, ನೂಕು ನುಗ್ಗಲಿನಲ್ಲೂ ಪರಿಸ್ಥಿತಿ ಬಹಳ ಮಟ್ಟಿಗೆ ಸಹಜವಾಗಿಯೇ ಇತ್ತು. ಅಲ್ಲಲ್ಲಿ ಕೆಲವು ಕುಡುಕ ಯುವಕರ ಕಿರುಕುಳ ಬಿಟ್ಟರೆ ಗಲಾಟೆಗಳೇನೂ ನಡೆಯಲಿಲ್ಲ. ಪೋಲೀಸರು ಕಡಿಮೆ ಸಂಖ್ಯೆಯಲ್ಲಿದ್ದರೂ ಬಂದೋಬಸ್ತು ಕಾರ್ಯ ಪ್ರಶಂಸನೀಯವಾಗಿತ್ತು. ಕೊಪ್ಪದ ಸರ್ಕಲ್ ಇನ್‌ಸ್ಪೆಕ್ಟರ್ ಪಂಚಾಕ್ಷರಿ ಸ್ವಾಮಿ ಖುದ್ದು ಉಸ್ತುವಾರಿ ವಹಿಸಿದ್ದರು.

ಕಾರ್ಯಕ್ರಮದ ಮಧ್ಯೆ, 'ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ' ವಂದನಾರ್ಪಣೆ ಕಾರ್ಯಕ್ರಮ ನಡೆಯಿತು.

ಸ್ಮರಣ ಸಂಚಿಕೆ ಬಿಡುಗಡೆ

ರಸಮಂಜರಿ ಕಾರ್ಯಕ್ರಮಕ್ಕೆ ಮೊದಲು "ರಜತ ಗಣಪತಿ" ಎಂಬ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ, ಸಾರ್ವಜನಿಕ ಗಣೇಶೋತ್ಸವಗಳ ಜನಕ ಬಾಲ ಗಂಗಾಧರ ತಿಲಕರ ಘನೋದ್ದೇಶಗಳ ಬಗ್ಗೆ ಹಾಗೂ ಪುರಸಭೆಯ ಮಾಜಿ ಅಧ್ಯಕ್ಷ ಡಿ॥ ಚಂದ್ರಮೌಳಿ ರಾವ್ ಅವರ ಬಗ್ಗೆ ಮಾತನಾಡಿದ ಹರಿಹರಪುರದ ಮಠಾಧೀಶರು ಗಣಪತಿಯ ಕರ್ತೃ ವಿಶ್ವನಾಥ್ ಅವರನ್ನು ಸನ್ಮಾನಿಸಿದರು. ಅಣ್ಣಯ್ಯ ಹೆಗ್ಡೆ ವಂದಿಸಿದರು.

ನ.ರಾ.ಪುರ ಭೂ ಬ್ಯಾಂಕ್ ಅಧ್ಯಕ್ಷರಾಗಿ ದಿವಾಕರ್

ನ.ರಾ.ಪುರ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಡಿ.ಸಿ. ದಿವಾಕರ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ತಾ॥ಕಾಂ.ಮಂಡಳಿಯ ಅಧ್ಯಕ್ಷರಾಗಿದ್ದ ಇವರು ಜಿಲ್ಲಾ ಸಹಕಾರ ಬ್ಯಾಂಕಿನ ಹಾಲಿ ನಿರ್ದೇಶಕರೂ ಆಗಿದ್ದಾರೆ.

ಶೃಂಗೇರಿ ಕಾಲೇಜಿನಲ್ಲಿ 'ಪ್ರತಿಭಾ ದಿನಾಚರಣೆ'

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸೆ. ೧೫ ರಂದು ಅಂತಿಮ ಪದವಿ ವಿದ್ಯಾರ್ಥಿಗಳ ನೇತೃತ್ವದಲ್ಲಿ 'ಪ್ರತಿಭಾ ದಿನಾಚರಣೆ' ನಡೆಯಿತು. ಉಪ ಪ್ರಾಂಶುಪಾಲ ಎ.ಕೆ.ಭಟ್ ಅಧ್ಯಕ್ಷತೆ ವಹಿಸಿದ್ದರು. ವಿಜಯ ಕುಮಾರ್ ಮುಖ್ಯ ಅತಿಥಿಗಳಾಗಿದ್ದರು. (ವರದಿ: ರಮೇಶ್ ಎಸ್ವಿ, ಬೇಗಾರು.)

ಎಂ.ಶ್ರೀನಿವಾಸ ಶೆಟ್ಟರ ನಿಧನ

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜು ವಿಶ್ವಸ್ಥ ಮಂಡಳಿಯ ಸದಸ್ಯರೂ, ಭಾರತೀ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷರೂ, ಕಿಗ್ಗ ಪ್ರೌಢಶಾಲಾ ಸಮಿತಿಯ ಅಧ್ಯಕ್ಷರೂ ಹಾಗೂ ಹಿರಿಯ ಕಾಂಗ್ರೆಸಿಗರೂ ಆಗಿದ್ದ ಎಂ.ಶ್ರೀನಿವಾಸ ಶೆಟ್ಟರು ಸೆ.೧೧ರಂದು ನಿಧನರಾದರು. ಅವರ ನಿಧನಕ್ಕೆ ಜೆ.ಸಿ.ಬಿ.ಎಂ. ಕಾಲೇಜು, ಕಿಗ್ಗ ಪ್ರೌಢಶಾಲೆ ಮತ್ತು ತಾ॥ ಕಾಂಗ್ರೆಸ್ ಸಮಿತಿಗಳಲ್ಲಿ ಸಂತಾಪ ಸೂಚಕ ಸಭೆಗಳು ನಡೆದವು. ಕಿಗ್ಗ ಶಾಲೆಯಲ್ಲಿ ಒಂದು ಕೊಠಡಿಗೆ ಅವರ ಹೆಸರಿಡಲು ನಿರ್ಧರಿಸಲಾಯಿತು.

ಸಂಬಳಕ್ಕಾಗಿ ಅಧ್ಯಾಪಕರ ಮೌನ ಮೆರವಣಿಗೆ

ಕೊಪ್ಪ: ಕಳೆದ ಮೂರು ತಿಂಗಳಿಂದ ಸಂಬಳ ಇಲ್ಲವಾಗಿರುವ ಈ ತಾಲ್ಲೂಕಿನ ಸುಮಾರು ೩೦೦ ಜನ ಪ್ರಾಥಮಿಕ ಶಾಲಾ ಶಿಕ್ಷಕರು ಸೆ. ೧೫ ರ ಶನಿವಾರ ಮಧ್ಯಾಹ್ನ ಮೌನ ಮೆರವಣಿಗೆ ನಡೆಸಿ ಸಂಬಳ ಪಾವತಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇವರ ಚಳುವಳಿಗೆ ತಾ॥ ಬಿಜೆಪಿ ಬೆಂಬಲಿಸಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಖು: ೨೧-೯-೮೮

ಸರಕು: ೨೯೦೦ ರಿಂದ ೩೩೧೦

ಬೆಟ್ಟೆ: ೧೯೦೦ ರಿಂದ ೨೩೫೦

ದೇವಾಲಯಗಳ ಸ್ಥಿತಿ ಸುಧಾರಣೆಗೆ ಒತ್ತಾಯ

ಕೊಪ್ಪ: ಇಲ್ಲಿ ಈಚೆಗೆ ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆದ ಕೊಪ್ಪ ತಾ॥ ಧಾರ್ಮಿಕ ಸಂಸ್ಥೆಗಳ ಸಂಚಾಲಕರ ಸಮಿತಿಯ ಸರ್ವಸದಸ್ಯರ ಸಭೆ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

೧) ರಾಜ್ಯದ ದೇವಾಲಯಗಳಿಗೆ ಸಂಬಂಧ ಪಟ್ಟಂತೆ ಏಕರೂಪದ ಕಾನೂನು ಜಾರಿಗೆ ಬರಬೇಕು. ೨) ದೇವಾಲಯಗಳ ಮತ್ತು ಧಾರ್ಮಿಕ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ರಾಜ್ಯ ಮಟ್ಟದಲ್ಲಿ ಕಾನೂನು ಬದ್ಧವಾದ ಧಾರ್ಮಿಕ ಸಂಸ್ಥೆ ಇರಬೇಕು. ೩) ಸರ್ಕಾರ ಕೊಡಬೇಕಾಗಿರುವ ಇನ್ನುಳಿದ ಶೇ. ೫೦ ಭಾಗ ತಸ್ತೀಕ್ ಹಣವನ್ನು ಕೂಡಲೆ ಕೊಡಬೇಕು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಉಪಸ್ಥಿತಿಯಲ್ಲಿ ಕೊಪ್ಪ ತಾ॥ ಧಾರ್ಮಿಕ ಸಮ್ಮೇಳನ ನಡೆಸಬೇಕೆಂದು ನಿರ್ಧರಿಸಲಾಯಿತು.

ರಾಷ್ಟ್ರಗೀತೆ ಸ್ಪರ್ಧೆ: ತನೂಡಿ ಶಾಲೆಗೆ ಮೊದಲ ಬಹುಮಾನ

ಕೊಪ್ಪ: ಆ. ೧೮ ರಂದು ಇಲ್ಲಿ ನಡೆದ ತಾ॥ ಮಟ್ಟದ ರಾಷ್ಟ್ರಗೀತೆ ಸ್ಪರ್ಧೆಯಲ್ಲಿ ತನೂಡಿಯ ಕಿ.ಪ್ರಾ.ಶಾಲೆ ಮೊದಲ ಬಹುಮಾನ ಗಳಿಸಿದೆ. ಭಾಗವಹಿಸಿದ್ದ ಮಕ್ಕಳು– ಮಂಜುಳ, ಸುಜಾತ, ಸರೋಜ, ಮಹೇಶ ಮತ್ತು ಚಂದ್ರಶೇಖರ.

ಸಂಕ್ಷೇಪ ಸುದ್ದಿ

ಗನ್ ಶಾಟ್

ಕೊಪ್ಪ: ಇಲ್ಲಿಗೆ ಸಮೀಪದ ಕೌರಿಯ ಬಳಿ ಈಚೆಗೆ ಜೋಯ್ ಎಂಬವನ ಕೋವಿಯಿಂದ ಹಾರಿದ ಗುಂಡಿನಿಂದ ತೀವ್ರ ಗಾಯಗೊಂಡಿದ್ದ ಮೋಹನ್ ಎಂಬಾತ ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಪಾಯದಿಂದ ಪಾರಾಗಿದ್ದಾರೆನ್ನಲಾಗಿದೆ. ಜೋಯ್‌ನನ್ನು ಬಂಧಿಸಿ, ಕೋವಿ ವಶಪಡಿಸಿಕೊಂಡಿರುವ ಕೊಪ್ಪದ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮಟ್ಕಾ ಮನುಷ್ಯನಿಗೆ ನಿರೀಕ್ಷಣಾ ಜಾಮೀನು

ನ.ರಾ.ಪುರ: ಬಾಳೆಹೊನ್ನೂರು ಮತ್ತು ಸುತ್ತಮುತ್ತ ಈಚೆಗೆ ಕೆಚ್ಚೆದ್ದ ಮಟ್ಕಾ ಹಾವಳಿಯ ಮುಖ್ಯಸ್ಥನೆನ್ನಲಾಗಿದ್ದು, ಜೊತೆಗಾರರು ಈಚೆಗೆ ನ.ರಾ.ಪುರದ ಪ॥ಇ॥ರಿಂದ ಬಂಧಿತರಾದರೂ ತಾನು ತಲೆ ತಪ್ಪಿಸಿಕೊಂಡಿದ್ದ ಪಾಂಡುರಂಗ ಕಾಮತ್ ಎಂಬಾತ ನಿರೀಕ್ಷಣಾ ಜಾಮೀನು ಪಡೆದು ಬಾಳೆಹೊನ್ನೂರಿನಲ್ಲಿ ಆರಾಮವಾಗಿ ಓಡಾಡಿಕೊಂಡಿದ್ದಾನೆಂದು ಪೋಲೀಸ್ ಮೂಲಗಳಿಂದ ತಿಳಿದುಬಂದಿದೆ.

ಪಶು ವೈದ್ಯ ಶಾಲೆಗೆ ಒತ್ತಾಯ

ಕೊಪ್ಪ ತಾಲ್ಲೂಕಿನ ಮೇಗೂರು, ನಾರ್ವೆ ಮತ್ತು ಗಡೀಕಲ್ಲಿನಲ್ಲಿ ಪಶು ವೈದ್ಯ ಶಾಲೆ ತೆರೆಯುವಂತೆ ಶಾಸಕರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಹಣ ವಾಪಸ್

೨೬.೮.೮೮ ರ 'ಮುಂಜಾವು'ನಲ್ಲಿ ಪ್ರಕಟವಾಗಿದ್ದ 'ಐ.ಆರ್.ಡಿ.ಪಿ. ಸಾಲದ ಹೆಸರಲ್ಲಿ ಮೋಸ' ಪ್ರಕರಣದಲ್ಲಿ, ಕುಟ್ಟಿ ಶೆಟ್ಟಿ ಮತ್ತು ವಿಜಯೇಂದ್ರ ಸ್ವಲ್ಪ ಸ್ವಲ್ಪ ಹಣವನ್ನು ಇಬ್ಬರು ಅರ್ಜಿದಾರರಿಗೆ ಹಿಂದಿರುಗಿಸಿದ್ದಾರೆಂದು ಗೊತ್ತಾಗಿದೆ.

ಹರಿಹರಪುರ ಶರನ್ನವರಾತ್ರಿ

ಹರಿಹರಪುರ: ಇಲ್ಲಿನ ಮಠದಲ್ಲಿ ಪ್ರತೀ ವರ್ಷದಂತೆ ಶರನ್ನವರಾತ್ರಿ ಮಹೋತ್ಸವ ಮತ್ತು ಅ. ೩ ರಂದು ಚಂಡಿಕಾ ಹೋಮ, ರಾತ್ರಿ ಪಲ್ಲಕ್ಕಿ ಉತ್ಸವವೂ ನಡೆಯುತ್ತವೆ.

ನಿಸರ್ಗ ಸಂಪತ್ತಿನ ರಕ್ಷಣೆಗೆ ಕರೆ

(ಒಂದನೇ ಪುಟದಿಂದ)

ಸೇವಾ ಕಾರ್ಯಕ್ರಮಗಳಲ್ಲಿ ಬರೀ ಒಣ ಸಂಪ್ರದಾಯಕ್ಕಿಂತಲೂ ಇಂಥ ನಿಜವಾದ ಕಳಕಳಿ ರೂಢಿಸಿಕೊಳ್ಳಬೇಕು—ಎಂದು ಆಶಿಸಿದ ಶಿರಿಮನೆ ನಾಗರಾಜ್, ಇಲ್ಲಿನ ಪರಿಸರದ ರಕ್ಷಣೆಯ ಬಗ್ಗೆ ಕಳೆದ ವರ್ಷದ ಇದೇ ಸಮಾರಂಭದಲ್ಲಿ ತಾವು ವ್ಯಕ್ತಪಡಿಸಿದ ಅಭಿಪ್ರಾಯವೂ ಇಂದು ಜಿ. ವಿ. ಬಾಲಕೃಷ್ಣರ (ಸಿದ್ಧಪಡಿಸಿದ ಭಾಷಣದ) ಅಭಿಪ್ರಾಯವೂ ಒಂದೇ ಆಗಿರುವುದು ಕಾಕತಾಳೀಯವಾದರೂ ಆ ಸಮಸ್ಯೆಯ ತೀವ್ರತೆಯನ್ನು ಎತ್ತಿ ತೋರಿಸುತ್ತದೆ ಎಂದರು. 'ತುಂಗಾವಾರ್ತೆ' ಸಂಪಾದಕ ವಿಶ್ವನಾಥಶೆಟ್ಟಿ ದೇಶದಲ್ಲಿ ಪತ್ರಿಕೆಗಳ ಪ್ರಭಾವವನ್ನು ವಿವರಿಸಿ, ಪತ್ರಕರ್ತ ತನ್ನ ಟೀಕೆ ತಿದ್ದಿಕೊಳ್ಳುವುದಕ್ಕಾಗಿ ಬರೆಯಬಾರದು ಎಂದರು.

ಸ್ಥಳೀಯ ಪತ್ರಕರ್ತರು ಮತ್ತು ಅತಿಥಿಗಳನ್ನು ಶ್ರೀಗಂಧದ ಹಾರ ಹಾಕಿ ಗೌರವಿಸಿ, ಪ್ರಾಸಂಗಿಕವಾಗಿ ಮಾತನಾಡಿದ ಮಾಜಿ ಲಯನ್ಸ್ ಜಿಲ್ಲಾ ಗೌರ್ನರ್ ಪಿ.ಜಿ.ಗುರ್ಜರ್ ಅವರು, ಸಮಾಜದ ಕೆಲಸಕ್ಕೆ ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಆಹ್ವಾನಿಸುವುದರ ಜೊತೆಗೆ, ನಮ್ಮ ಮೇಲೆ ವಿಶ್ವಾಸವಿಟ್ಟು (ತನ್ನದೇ ಅಂಗ ಸಂಸ್ಥೆಗಳಿಗೆ ವಹಿಸಿದಂತೆ) "ಈ ಕೆಲಸ ನೀವು ಮಾಡಿ" ಎಂದು ನಮಗೆ ವಹಿಸುವುದಾದರೆ ಯಾವುದೇ ಜವಾಬ್ದಾರಿಯನ್ನು ಹೊರಲು ನಾವು (ಕ್ಲಬ್) ಸಿದ್ಧ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ॥ಮೋಹನ ಶೆಟ್ಟಿ ಅತ್ಯಂತ ಕಳಕಳಿಯಿಂದ ಪತ್ರಕರ್ತರಿಗೆ ಹೇಳಿದ ಕಿವಿಮಾತು— "ಮಾನವ ಮಾನವ ಒಂದಾಗುವಂಥ ವರದಿ ಕೊಡಿ. ದೇಶಕ್ಕೆ ದ್ವೇಷ-ಕ್ಲೇಷ ತರುವಂಥ ವರದಿ ಕೊಡಬೇಡಿ."

ಕಾರ್ಯದರ್ಶಿ ಗೋಪಾಲಕೃಷ್ಣ ಶೆಟ್ಟಿ ವಂದನಾರ್ಪಣೆ ಮಾಡಿದರು.

ಶೃಂಗೇರಿಯಲ್ಲಿ ಜೇಸೀಸ್ ಆರಂಭ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಇಲ್ಲಿನ ಪುರಭವನದಲ್ಲಿ ಸೆ. ೧೬ರಂದು ವಿಶಿಷ್ಟ ಪದ್ಧತಿ, ಪರಿಸ್ಥಿತಿಗಳೊಡನೆ ಶೃಂಗೇರಿ ಜೇಸೀಸ್ ಕ್ಲಬ್ಬಿನ ಉದ್ಘಾಟನೆ ಕಾಲೇಜು ಪ್ರಿನ್ಸಿಪಾಲ್ ಎಂ. ಕೃಷ್ಣಪ್ಪಯ್ಯ ಅವರಿಂದ ನಡೆಯಿತು. ಲೋಕೋಪಯೋಗಿ ಇಲಾಖೆ ಸ॥ ಇಂಜಿನಿಯರ್ ಎಂ. ಜಿ. ಸೋಮಶೇಖರ್ ಅಧ್ಯಕ್ಷರಾಗಿ, ಗಜಾನನ ಎಂ. ಭಟ್ ಕಾರ್ಯದರ್ಶಿಯಾಗಿ ಇರುವ ಈ ಸಂಸ್ಥೆಯ ೨೦ ಜನ ಸದಸ್ಯರಿಗೆ ಶಿವಮೊಗ್ಗ ಜೇಸೀಸ್‌ನ ಎಸ್. ವಿ. ಶಾಸ್ತ್ರಿ ಪ್ರಮಾಣವಚನ ಬೋಧಿಸಿದರು.

ಅಮೆರಿಕ ಮಾತೃತ್ವ ಹೊಂದಿದ ಈ ಸಂಸ್ಥೆ ವ್ಯಕ್ತಿ ವಿಕಸನಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟು ಸೇವಾ ಕಾರ್ಯವನ್ನು ಅನಿಯದಾಗಿ ಪರಿಗಣಿಸುತ್ತದೆ. ಶೃಂಗೇರಿ ಘಟಕದಲ್ಲಿ ಹೆಚ್ಚಾಗಿ ಅಧಿಕಾರಿಗಳು, ಕೆಲವು ವ್ಯಾಪಾರಸ್ಥರು ಸದಸ್ಯರಾಗಿದ್ದು, ಈ ಸಂಸ್ಥೆ ವ್ಯಾಪಾರೋದ್ಯಮಿಗಳಿಗೆ ಹೆಚ್ಚು ಸಹಕಾರಿ ಎಂದು ಹೇಳಲಾಗಿದೆ.

ಸಮಾರಂಭದಲ್ಲಿ ಕೆ. ಆರ್. ಅಣ್ಣಯ್ಯ ಹೆಗ್ಡೆ, ಎ.ಎಸ್.ಚಂದ್ರಶೇಖರ್ ಮತ್ತು ಶಿವಮೊಗ್ಗ ಜೇಸೀಸ್ ಕಾರ್ಯನಿರ್ವಾಹಕರು ಭಾಗವಹಿಸಿದ್ದರು.

ಸಮಾರಂಭದ ಅಂಗವಾಗಿ ಮನರಂಜನೆ ಕಾರ್ಯಕ್ರಮ ನಡೆಯಿತು.

ಹಿರಿಯ ವೈದ್ಯಾಧಿಕಾರಿ ಭೇಟಿ

ಕೊಪ್ಪ: ಮೈಸೂರು ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಹ ನಿರ್ದೇಶಕರಾದ ಡಾ॥ ಲೀಲಾವತಿ ದೇವಿದಾಸ್ ರವರು ಸೆ. ೩೦ ರಂದು ಇಲ್ಲಿಗೆ ಭೇಟಿ ಕೊಡಲಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿರಿಮನೆ ನಾಗರಾಜ್, ಅಚ್ಚು: ದಿವಿಟಿಗೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: ಕಲ್ಕುಳಿ ವಿಠಲ ಹೆಗ್ಡೆ

ಶೃಂಗೇರಿಯಲ್ಲಿ ಬಿ.ಕೆ.ಸುಮಿತ್ರ ಅವರ ಕಾರ್ಯಕ್ರಮಕ್ಕೆ ದಾಖಲೆಯ ಜನ ಪ್ರವಾಹ

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಇಲ್ಲಿ ಬೆಳ್ಳಿಹಬ್ಬದ ಸಾರ್ವಜನಿಕ ಗಣೇಶೋತ್ಸವದ ಮುಕ್ತಾಯದ ಮುನ್ನಾ ದಿನ ನಡೆದ, ಚಲನಚಿತ್ರ ಹಿನ್ನೆಲೆ ಗಾಯಕಿ ಬಿ.ಕೆ.ಸುಮಿತ್ರ ಅವರ ರಸಮಂಜರಿ ಕಾರ್ಯಕ್ರಮಕ್ಕೆ ಸುತ್ತಮುತ್ತಲ ದೂರ ದೂರದ ಹಳ್ಳಿಗಳಿಂದಲೂ ಸೇರಿದಂತೆ ೪ ಸಾವಿರಕ್ಕೂ ಹೆಚ್ಚು ಜನರ ಭಾರಿ ಜನ ಸಂದಣಿ ಸೇರಿತ್ತು. ಇದು ಇಲ್ಲಿನ ಗಣಪತಿ ಇತಿಹಾಸದಲ್ಲಿ ಒಂದು ದಾಖಲೆ ಎನ್ನಲಾಗಿದೆ.

ಕಿಷ್ಕಿಂಧ ಜಾಗ, ನೂಕು ನುಗ್ಗಲಿನಲ್ಲೂ ಪರಿಸ್ಥಿತಿ ಬಹಳ ಮಟ್ಟಿಗೆ ಸಹಜವಾಗಿಯೇ ಇತ್ತು. ಅಲ್ಲಲ್ಲಿ ಕೆಲವು ಕುಡುಕ ಯುವಕರ ಕಿರುಕುಳ ಬಿಟ್ಟರೆ ಗಲಾಟೆಗಳೇನೂ ನಡೆಯಲಿಲ್ಲ. ಪೋಲೀಸರು ಕಡಿಮೆ ಸಂಖ್ಯೆಯಲ್ಲಿದ್ದರೂ ಬಂದೋಬಸ್ತು ಕಾರ್ಯ ಪ್ರಶಂಸನೀಯವಾಗಿತ್ತು. ಕೊಪ್ಪದ ಸರ್ಕಲ್ ಇನ್‌ಸ್ಪೆಕ್ಟರ್ ಪಂಚಾಕ್ಷರಿ ಸ್ವಾಮಿ ಖುದ್ದು ಉಸ್ತುವಾರಿ ವಹಿಸಿದ್ದರು

ಕಾರ್ಯಕ್ರಮದ ಮಧ್ಯೆ, 'ಶಿವಪೂಜೆಯಲ್ಲಿ ಕರಡಿ ಬಿಟ್ಟಂತೆ' ವಂದನಾರ್ಪಣೆ ಕಾರ್ಯಕ್ರಮ ನಡೆಯಿತು.

ಸ್ಮರಣ ಸಂಚಿಕೆ ಬಿಡುಗಡೆ

ರಸಮಂಜರಿ ಕಾರ್ಯಕ್ರಮಕ್ಕೆ ಮೊದಲು "ರಜತ ಗಣಪತಿ" ಎಂಬ ಸ್ಮರಣ ಸಂಚಿಕೆ ಬಿಡುಗಡೆ ಮಾಡಿ, ಸಾರ್ವಜನಿಕ ಗಣೇಶೋತ್ಸವಗಳ ಜನಕ ಬಾಲ ಗಂಗಾಧರ ತಿಲಕರ ಧ್ಯೇಯೋದ್ದೇಶಗಳ ಬಗ್ಗೆ ಹಾಗೂ ಪುರಸಭೆಯ ಮಾಜಿ ಅಧ್ಯಕ್ಷ ದಿ|| ಚಂದ್ರಮೌಳಿ ರಾವ್ ಅವರ ಬಗ್ಗೆ ಮಾತನಾಡಿದ ಹರಿಹರಪುರದ ಮಠಾಧೀಶರು ಗಣಪತಿಯ ಕರ್ತೃ ವಿಶ್ವನಾಥ್ ಅವರನ್ನು ಸನ್ಮಾನಿಸಿದರು. ಅಣ್ಣಯ್ಯ ಹೆಗ್ಡೆ ವಂದಿಸಿದರು.

ಎಂ.ಶ್ರೀನಿವಾಸ ಶೆಟ್ಟರ ನಿಧನ

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜು ವಿಶ್ವಸ್ತ ಮಂಡಳಿಯ ಸದಸ್ಯರೂ, ಭಾರತೀ ವಿದ್ಯಾ ಸಂಸ್ಥೆಯ ಉಪಾಧ್ಯಕ್ಷರೂ, ಕಿಗ್ಗ ಪ್ರೌಢಶಾಲಾ ಸಮಿತಿಯ ಅಧ್ಯಕ್ಷರೂ ಹಾಗೂ ಹಿರಿಯ ಕಾಂಗ್ರೆಸಿಗರೂ ಆಗಿದ್ದ ಎಂ.ಶ್ರೀನಿವಾಸ ಶೆಟ್ಟರು ಸೆ.೧೧ರಂದು ನಿಧನರಾದರು. ಅವರ ನಿಧನಕ್ಕೆ ಜೆ.ಸಿ.ಬಿ.ಎಂ. ಕಾಲೇಜು, ಕಿಗ್ಗ ಪ್ರೌಢಶಾಲೆ ಮತ್ತು ತಾ|| ಕಾಂಗ್ರೆಸ್ ಸಮಿತಿಗಳಲ್ಲಿ ಸಂತಾಪ ಸೂಚಕ ಸಭೆಗಳು ನಡೆದವು. ಕಿಗ್ಗ ಶಾಲೆಯಲ್ಲಿ ಒಂದು ಕೊಠಡಿಗೆ ಅವರ ಹೆಸರಿಡಲು ನಿರ್ಧರಿಸಲಾಯಿತು.

ಸಂಬಳಕ್ಕಾಗಿ ಅಧ್ಯಾಪಕರ ಮೌನ ಮೆರವಣಿಗೆ

ಕೊಪ್ಪ: ಕಳೆದ ಮೂರು ತಿಂಗಳಿಂದ ಸಂಬಳ ಇಲ್ಲವಾಗಿರುವ ಈ ತಾಲ್ಲೂಕಿನ ಸುಮಾರು ೩೦೦ ಜನ ಪ್ರಾಥಮಿಕ ಶಾಲಾ ಶಿಕ್ಷಕರು ಸೆ. ೧೫ ರ ಶನಿವಾರ ಮಧ್ಯಾಹ್ನ ಮೌನ ಮೆರವಣಿಗೆ ನಡೆಸಿ ಸಂಬಳ ಪಾವತಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಇವರ ಚಳುವಳಿಗೆ ತಾ|| ಬಿಜೆಪಿ ಬೆಂಬಲಿಸಿದೆ

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: ೨೧-೯-೮೪

ಸರಕು: ೨೯೦೦ ರಿಂದ ೩೫೧೦

ಬೆಟ್ಟೆ: ೧೯೦೦ ರಿಂದ ೨೩೯೦

ನ.ರಾ.ಪುರ ಭೂ ಬ್ಯಾಂಕ್ ಅಧ್ಯಕ್ಷರಾಗಿ ದಿವಾಕರ್

ನ.ರಾ.ಪುರ: ಇಲ್ಲಿನ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಡಿ.ಸಿ. ದಿವಾಕರ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ತಾ||ಅ.ಮಂಡಳಿಯ ಅಧ್ಯಕ್ಷರಾಗಿದ್ದ ಇವರು ಜಿಲ್ಲಾ ಸಹಕಾರ ಬ್ಯಾಂಕಿನ ಹಾಲಿ ನಿರ್ದೇಶಕರೂ ಆಗಿದ್ದಾರೆ.

ಶೃಂಗೇರಿ ಕಾಲೇಜಿನಲ್ಲಿ 'ಪ್ರತಿಭಾ ದಿನಾಚರಣೆ'

ಶೃಂಗೇರಿ: ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಸೆ. ೧೫ ರಂದು ಅಂತಿಮ ಪದವಿ ವಿದ್ಯಾರ್ಥಿಗಳ ನೇತೃತ್ವದಲ್ಲಿ 'ಪ್ರತಿಭಾ ದಿನಾಚರಣೆ' ನಡೆಯಿತು. ಉಪ ಪ್ರಾಂಶುಪಾಲ ಎ.ಕೆ.ಭಟ್ ಅಧ್ಯಕ್ಷತೆ ವಹಿಸಿದ್ದರು. ವಿಜಯಕುಮಾರ್ ಮುಖ್ಯ ಅತಿಥಿಗಳಾಗಿದ್ದರು.

(ವರದಿ: ರಮೇಶ್ ಎಸ್ವಿ, ಬೇಗಾರು.)

ದೇವಾಲಯಗಳ ಸ್ಥಿತಿ ಸುಧಾರಣೆಗೆ ಒತ್ತಾಯ

ಕೊಪ್ಪ: ಇಲ್ಲಿ ಈಚೆಗೆ ಬಿ.ಜಿ.ಚಿದಂಬರ್ ಅಧ್ಯಕ್ಷತೆಯಲ್ಲಿ ನಡೆದ ಕೊಪ್ಪ ತಾ|| ಧಾರ್ಮಿಕ ಸಂಸ್ಥೆಗಳ ಸಂಚಾಲಕರ ಸಮಿತಿಯ ಸರ್ವಸದಸ್ಯರ ಸಭೆ ಕೆಳಕಂಡ ನಿರ್ಣಯಗಳನ್ನು ಅಂಗೀಕರಿಸಿತು.

೧) ರಾಜ್ಯದ ದೇವಾಲಯಗಳಿಗೆ ಸಂಬಂಧಪಟ್ಟಂತೆ ಏಕರೂಪದ ಕಾನೂನು ಜಾರಿಗೆ ಬರಬೇಕು. ೨) ದೇವಾಲಯಗಳ ಮತ್ತು ಧಾರ್ಮಿಕ ಸಂಸ್ಥೆಗಳ ಕಾರ್ಯ ನಿರ್ವಹಣೆಗೆ ರಾಜ್ಯ ಮಟ್ಟದಲ್ಲಿ ಕಾನೂನು ಬದ್ಧವಾದ ಧಾರ್ಮಿಕ ಸಂಸ್ಥೆ ಇರಬೇಕು. ೩) ಸರ್ಕಾರ ಕೊಡಬೇಕಾಗಿರುವ ಇನ್ನುಳಿದ ಶೇ. ೫೦ ಭಾಗ ತಸ್ತೀಕ್ ಹಣವನ್ನು ಕೂಡಲೆ ಕೊಡಬೇಕು.

ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರ ಉಪಸ್ಥಿತಿಯಲ್ಲಿ ಕೊಪ್ಪ ತಾ|| ಧಾರ್ಮಿಕ ಸಮ್ಮೇಳನ ನಡೆಸಬೇಕೆಂದು ನಿರ್ಧರಿಸಲಾಯಿತು.

ರಾಷ್ಟ್ರಗೀತೆ ಸ್ಪರ್ಧೆ : ತನೂಡಿ ಶಾಲೆಗೆ ಮೊದಲ ಬಹುಮಾನ

ಕೊಪ್ಪ: ಆ. ೧೪ ರಂದು ಇಲ್ಲಿ ನಡೆದ ತಾ|| ಮಟ್ಟದ ರಾಷ್ಟ್ರಗೀತೆ ಸ್ಪರ್ಧೆಯಲ್ಲಿ ತನೂಡಿಯ ಕಿ.ಪ್ರಾ.ಶಾಲೆ ಮೊದಲ ಬಹುಮಾನ ಗಳಿಸಿದೆ. ಭಾಗವಹಿಸಿದ್ದ ಮಕ್ಕಳು– ಮಂಜುಳ. ಸುಜಾತ, ಸರೋಜ, ಮಹೇಶ ಮತ್ತು ಚಂದ್ರಶೇಖರ.

ನಿಸರ್ಗ ಸಂಪತ್ತಿನ ರಕ್ಷಣೆಗೆ ಕರೆ

(ಒಂದನೇ ಪುಟದಿಂದ)

ಸೇವಾ ಕಾರ್ಯಕ್ರಮಗಳಲ್ಲಿ ಬರೀ ಒಣ ಸಂಪ್ರದಾಯಕ್ಕಿಂತಲೂ ಇಂಥ ನಿಜವಾದ ಕಳಕಳಿ ರೂಢಿಸಿಕೊಳ್ಳಬೇಕು–ಎಂದು ಆಶಿಸಿದ ಸಿರಿಮನೆ ನಾಗರಾಜ್, ಇಲ್ಲಿನ ಪರಿಸರದ ರಕ್ಷಣೆಯ ಬಗ್ಗೆ ಕಳೆದ ವರ್ಷದ ಇದೇ ಸಮಾರಂಭದಲ್ಲಿ ತಾವು ವ್ಯಕ್ತಪಡಿಸಿದ ಅಭಿಪ್ರಾಯವೂ ಇಂದು ಜಿ. ವಿ. ಬಾಲಕೃಷ್ಣರ (ಸಿದ್ಧಪಡಿಸಿದ ಭಾಷಣದ) ಅಭಿಪ್ರಾಯವೂ ಒಂದೇ ಆಗಿರುವುದು ಕಾಕತಾಳೀಯವಾದರೂ ಆ ಸಮಸ್ಯೆಯ ತೀವ್ರತೆಯನ್ನು ಎತ್ತಿ ತೋರಿಸುತ್ತದೆ ಎಂದರು. 'ತುಂಗಾವಾರ್ತೆ' ಸಂಪಾದಕ ವಿಶ್ವನಾಥಶೆಟ್ಟಿ, ದೇಶದಲ್ಲಿ ಪತ್ರಿಕೆಗಳ ಪ್ರಭಾವವನ್ನು ವಿವರಿಸಿ, ಪತ್ರಕರ್ತ ತನ್ನ ತೀಟೆ ತೀರಿಸಿಕೊಳ್ಳುವುದಕ್ಕಾಗಿ ಬರೆಯಬಾರದು ಎಂದರು.

ಸ್ಥಳೀಯ ಪತ್ರಕರ್ತರು ಮತ್ತು ಅತಿಥಿಗಳನ್ನು ಶ್ರೀಗಂಧದ ಹಾರ ಹಾಕಿ ಗೌರವಿಸಿ, ಪ್ರಾಸಂಗಿಕವಾಗಿ ಮಾತನಾಡಿದ ಮಾಜಿ ಲಯನ್ಸ್ ಜಿಲ್ಲಾ ಗೌರ್ನರ್ ಪಿ.ಜಿ.ಗುರ್ಜರ್ ಅವರು, ಸಮಾಜದ ಕೆಲಸಕ್ಕೆ ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಆಹ್ವಾನಿಸುವುದರ ಜೊತೆಗೆ, ನಮ್ಮ ಮೇಲೆ ವಿಶ್ವಾಸವಿಟ್ಟು (ತನ್ನದೇ ಅಂಗ ಸಂಸ್ಥೆಗಳಿಗೆ ವಹಿಸಿದಂತೆ) "ಈ ಕೆಲಸ ನೀವು ಮಾಡಿ" ಎಂದು ನಮಗೆ ವಹಿಸುವುದಾದರೆ ಯಾವುದೇ ಜವಾಬ್ದಾರಿಯನ್ನು ಹೊರಲು ನಾವು (ಕ್ಲಬ್) ಸಿದ್ಧ ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ||ಮೋಹನ ಶೆಟ್ಟಿ ಅತ್ಯಂತ ಕಳಕಳಿಯಿಂದ ಪತ್ರಕರ್ತರಿಗೆ ಹೇಳಿದ ಕಿವಿಮಾತು—"ಮಾನವ ಮಾನವ ಒಂದಾಗುವಂಥ ವರದಿ ಕೊಡಿ. ದೇಶಕ್ಕೆ ದ್ವೇಷ-ಕ್ಲೇಷ ತರುವಂಥ ವರದಿ ಕೊಡಬೇಡಿ."

ಕಾರ್ಯದರ್ಶಿ ಗೋಪಾಲಕೃಷ್ಣ ಶೆಟ್ಟಿ ವಂದನಾರ್ಪಣೆ ಮಾಡಿದರು.

ಸಂಕ್ಷೇಪ ಸುದ್ದಿ

ಗನ್ ಶಾಟ್

ಕೊಪ್ಪ: ಇಲ್ಲಿಗೆ ಸಮೀಪದ ಕೌರಿಯ ಬಳಿ ಈಚೆಗೆ ಜೋಯ್ ಎಂಬವನ ಕೋವಿಯಿಂದ ಹಾರಿದ ಗುಂಡಿನಿಂದ ತೀವ್ರ ಗಾಯಗೊಂಡಿದ್ದ ಮೋಹನ್ ಎಂಬಾತ ಮಣಿಪಾಲದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು ಅಪಾಯದಿಂದ ಪಾರಾಗಿದ್ದಾರೆನ್ನಲಾಗಿದೆ. ಜೋಯ್‌ನನ್ನು ಬಂಧಿಸಿ, ಕೋವಿ ವಶಪಡಿಸಿಕೊಂಡಿರುವ ಕೊಪ್ಪದ ಪೋಲೀಸರು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಮಟ್ಕಾ ಮನುಷ್ಯನಿಗೆ ನಿರೀಕ್ಷಣಾ ಜಾಮೀನು

ನ.ರಾ.ಪುರ: ಬಾಳೆಹೊನ್ನೂರು ಮತ್ತು ಸುತ್ತಮುತ್ತ ಈಚೆಗೆ ಹೆಚ್ಚಿದ್ದ ಮಟ್ಕಾ ಹಾವಳಿಯ ಮುಖ್ಯಸ್ಥನೆನ್ನಲಾಗಿದ್ದು, ಜೊತೆಗಾರರು ಈಚೆಗೆ ನ.ರಾ.ಪುರದ ಪೊ||ಇ||ರಿಂದ ಬಂಧಿತರಾದರೂ ತಾನು ತಲೆ ತಪ್ಪಿಸಿಕೊಂಡಿದ್ದ ಪಾಂಡುರಂಗ ಕಾಮತ್ ಎಂಬಾತ ನಿರೀಕ್ಷಣಾ ಜಾಮೀನು ಪಡೆದು ಬಾಳೆಹೊನ್ನೂರಿನಲ್ಲಿ ಆರಾಮವಾಗಿ ಓಡಾಡಿಕೊಂಡಿದ್ದಾನೆಂದು ಪೋಲೀಸ್ ಮೂಲಗಳಿಂದ ತಿಳಿದುಬಂದಿದೆ.

ಪಶು ವೈದ್ಯ ಶಾಲೆಗೆ ಒತ್ತಾಯ

ಕೊಪ್ಪ ತಾಲ್ಲೂಕಿನ ಮೇಗೂರು, ನಾರ್ವೆ ಮತ್ತು ಗಡೀಕಲ್ಲಿನಲ್ಲಿ ಪಶು ವೈದ್ಯ ಶಾಲೆ ತೆರೆಯುವಂತೆ ಶಾಸಕರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.

ಹಣ ವಾಪಸ್

೨೬.೮.೮೪ ರ 'ಮುಂಜಾವು'ನಲ್ಲಿ ಪ್ರಕಟವಾಗಿದ್ದ 'ಐ.ಆರ್.ಡಿ.ಪಿ. ಸಾಲದ ಹೆಸರಲ್ಲಿ ಮೋಸ' ಪ್ರಕರಣದಲ್ಲಿ, ಕುಟ್ಟಿ ಶೆಟ್ಟಿ ಮತ್ತು ವಿಜಯೇಂದ್ರ ಸ್ವಲ್ಪ ಸ್ವಲ್ಪ ಹಣವನ್ನು ಇಬ್ಬರು ಅರ್ಜಿದಾರರಿಗೆ ಹಿಂದಿರುಗಿಸಿದ್ದಾರೆಂದು ಗೊತ್ತಾಗಿದೆ.

ಹರಿಹರಪುರ ಶರನ್ನವರಾತ್ರಿ

ಹರಿಹರಪುರ: ಇಲ್ಲಿನ ಮಠದಲ್ಲಿ ಪ್ರತೀ ವರ್ಷದಂತೆ ಶರನ್ನವರಾತ್ರಿ ಮಹೋತ್ಸವ ಮತ್ತು ಅ. ೩ ರಂದು ಚಂಡಿಕಾ ಹೋಮ, ರಾತ್ರಿ ಪಲ್ಲಕ್ಕಿ ಉತ್ಸವವೂ ನಡೆಯುತ್ತವೆ.

ಶೃಂಗೇರಿಯಲ್ಲಿ ಜೇಸೀಸ್ ಆರಂಭ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ಇಲ್ಲಿನ ಪುರಭವನದಲ್ಲಿ ಸೆ. ೧೬ರಂದು ವಿಶಿಷ್ಟ ಪದ್ಧತಿ, ಪರಿಸ್ಥಿತಿಗಳೊಡನೆ ಶೃಂಗೇರಿ ಜೇಸೀಸ್ ಕ್ಲಬ್ಬಿನ ಉದ್ಘಾಟನೆ ಕಾಲೇಜು ಪ್ರಿನ್ಸಿಪಾಲ್ ಎಂ. ಕೃಷ್ಣಪ್ಪಯ್ಯ ಅವರಿಂದ ನಡೆಯಿತು. ಲೋಕೋಪಯೋಗಿ ಇಲಾಖೆ ಸ|| ಇಂಜಿನಿಯರ್ ಎಂ. ಜಿ. ಸೋಮ ಶೇಖರ್ ಅಧ್ಯಕ್ಷರಾಗಿ, ಗಜಾನನ ಎಂ. ಭಟ್ ಕಾರ್ಯದರ್ಶಿಯಾಗಿ ಇರುವ ಈ ಸಂಸ್ಥೆಯ ೨೦ ಜನ ಸದಸ್ಯರಿಗೆ ಶಿವಮೊಗ್ಗ ಜೇಸೀಸ್‌ನ ಎಸ್. ವಿ. ಶಾಸ್ತ್ರಿ ಪ್ರಮಾಣವಚನ ಬೋಧಿಸಿದರು.

ಅಮೆರಿಕ ಮಾತೃತ್ವ ಹೊಂದಿದ ಈ ಸಂಸ್ಥೆ ವ್ಯಕ್ತಿ ವಿಕಸನಕ್ಕೆ ಮೊದಲ ಪ್ರಾಶಸ್ತ್ಯ ಕೊಟ್ಟು ಸೇವಾ ಕಾರ್ಯವನ್ನು ೨ನೆಯದಾಗಿ ಪರಿಗಣಿಸುತ್ತದೆ. ಶೃಂಗೇರಿ ಘಟಕದಲ್ಲಿ ಹೆಚ್ಚಾಗಿ ಅಧಿಕಾರಿಗಳು, ಕೆಲವು ವ್ಯಾಪಾರಸ್ಥರು ಸದಸ್ಯರಾಗಿದ್ದು, ಈ ಸಂಸ್ಥೆ ವ್ಯಾಪಾರೋದ್ಯಮಿಗಳಿಗೆ ಹೆಚ್ಚು ಸಹಕಾರಿ ಎಂದು ಹೇಳಲಾಗಿದೆ

ಸಮಾರಂಭದಲ್ಲಿ ಕೆ. ಆರ್. ಅಣ್ಣಯ್ಯ ಹೆಗ್ಡೆ, ಎ.ಎಸ್.ಚಂದ್ರಶೇಖರ್ ಮತ್ತು ಶಿವಮೊಗ್ಗ ಜೇಸೀಸ್ ಕಾರ್ಯನಿರ್ವಾಹಕರು ಭಾಗವಹಿಸಿದ್ದರು

ಸಮಾರಂಭದ ಅಂಗವಾಗಿ ಮನರಂಜನೆ ಕಾರ್ಯಕ್ರಮ ನಡೆಯಿತು.

ಹಿರಿಯ ವೈದ್ಯಾಧಿಕಾರಿ ಭೇಟಿ

ಕೊಪ್ಪ: ಮೈಸೂರು ವಿಭಾಗದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಹ ನಿರ್ದೇಶಕರಾದ ಡಾ|| ಲೀಲಾವತಿ ದೇವಿದಾಸ್ ರವರು ಸೆ. ೩೦ ರಂದು ಇಲ್ಲಿಗೆ ಭೇಟಿ ಕೊಡಲಿದ್ದಾರೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಿಕೆ ಅಚ್ಚುಕೂಟ, ಕೊಪ್ಪ. ಶೃಂಗೇರಿ ಪ್ರತಿನಿಧಿ: ಕಲ್ಕುಳಿ ವಿಠಲ ಹೆಗ್ಡೆ